**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ**

**ಹಿರೇಕೆರೂರು.**

**ಸಿ.ಸಿ.661/2022**

ಪಿರ್ಯಾಧಿ : ಶ್ರೀ ಪಾಂಡುರಂಗಪ್ಪ ತಂದ ಶಿವಲಿಂಗಪ್ಪ ಕಾಟೇನಹಳ್ಳಿ
ವ: 31 ವರ್ಷ, ಉ: ಖಾಸಗಿ ಉದ್ಯೋಗ ವ ಕೃಷಿ,
ಸಾ: ದೂಪದಹಳ್ಳಿ, ಪೋಸ್ಟ್ಃ ಎಂ ಕೆ ಯತ್ತಿನಹಳ್ಳಿ,
ತಾ: ಹಿರೇಕೆರೂರು, ಜಿ: ಹಾವೇರಿ.

**ವಿರುದ್ಧ**

ಆರೋಪಿ : ಈಶ್ವರಪ್ಪ ತಂದೆ ಮಲ್ಲೇಶಪ್ಪ ಕಲ್ಲಾಪುರ
ವ: 38 ವರ್ಷ, ಉ: ವ್ಯಾಪಾರ,
ಸಾ: ಹನುಮಾರಹಳ್ಳಿ, ಪೋಸ್ಟ್ಃ ಹೊಸನೀರಲಗಿ,
ತಾ: ಶಿಗ್ಗಾವ, ಜಿ: ಹಾವೇರಿ.
ಈಶ್ವರಪ್ಪ ತಂದೆ ಮಲ್ಲೇಶಪ್ಪ ಕಲ್ಲಾಪುರ
ಕೇರ್ ಆಫ್ಃ ನಿಂಗನಗೌಡ ತಂದೆ ನೀಲಪ್ಪಗೌಡ ಕರೇಗೌಡ್ರ
ಸಾ/ಪೋಃ ತೊಂಡಿಹಾಳ, ತಾಃ ಯಲಬುರ್ಗ, ಜಿಃ ಕೊಪ್ಪಳ.

**ಕಲಂ 313 ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ 1 :-** ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ :- **ಹೌದು**

**ಪ್ರಶ್ನೆ 2 :- ಫ್ರಾಸಾ-1 ಪಾಂಡುರಂಗಪ್ಪ, ಫ್ರಾಸಾ-2 ಬಸನಗೌಡ ಅವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಃ-** ಆರೋಪಿಯಾದ ನೀವು 2021 ರ ಡಿಸೆಂಬರ್ ತಿಂಗಳ ಮೂರನೇ ವಾರದಲ್ಲಿ ನಿಮ್ಮ ವ್ಯಾಪಾರದ ಅವಶ್ಯಕತೆ ಹಾಗೂ

ಗೃಹಕೃತ್ಯದ ಅಡಚಣೆಗಳಿಗಾಗಿ ಸಾಕ್ಷಿದಾರರ ಸಮಕ್ಷಮ ರೂ. 5,00,000/- ಗಳನ್ನು ಫಿರ್ಯಾದಿ ಅವರಿಂದ ಸಾಲವಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ಕೆನರಾ ಬ್ಯಾಂಕ್, ಹಿರೇಕೆರೂರು ಶಾಖೆಯ ರೂ. 5,00,000/- ಗಳಿಗೆ ಚೆಕ್ ಸಂಖ್ಯೆ 427596 ದಿನಾಂಕ 27-07-2022 ರ ಚೆಕ್‌ನ್ನು ಫಿರ್ಯಾದಿ ಅವರಿಗೆ ನೀಡಿದ್ದು, ಸದರಿ ಚೆಕನ್ನು ನಗದೀಕರಿಸಲು ದಿ: 27-07-2022 ರಂದು ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಗೆ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ (Funds insufficient) ಎಂದು ಅಮಾನ್ಯಗೊಂಡಿರುತ್ತದೆ. ಈ ಸಂಬಂಧ ದಿನಾಂಕ 17-08-2022 ರಂದು ನಿಮಗೆ ಲೀಗಲ್ ನೋಟೀಸ್ ನೀಡಿದ್ದು, ನೋಟಿಸ್ ಸ್ವೀಕರಿಸದೆ ನಿರಾಕರಿಸಿದ್ದು 15 ದಿವಸ ಕಳೆದರೂ ಸಹ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಹಾಗೂ ಸಾಲ ಮರುಪಾವತಿ ಮಾಡಿರುವುದಿಲ್ಲ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

ಪ್ರಶ್ನೆ 3 :- ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯಾ?

ಉತ್ತರ :-

ಪ್ರಶ್ನೆ 4 :- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರ :-

(**ಮೇಲಿನ ಕಲಂ 313 ಹೇಳಿಕೆಯನ್ನು ಆರೋಪಿಗನಿಗೆ ಓದಿ ಹೇಳಿದಾಗ ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು**)

ದಿನಾಂಕಃ10-06-2026

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹಿರೇಕೆರೂರ.

**ಆರೋಪಿಯ ಸಹಿಃ**